ಅಧ್ಯಕ್ಷರು.–ಚುಕ್ಕೆ ಗುರುತಿಲ್ಲದ ಪ್ರಶ್ನೆ ೮೦ (೧೧೭)ನ್ನು ವಾಪಸ್ಸಿಗೆ ಹಾಕಲಾಗಿದೆ.

ಶ್ರೀಮತಿ ಪೊಟವ್ಮ್ಮ.–ನಾನು ಕೇಳಿರುವುದು ಬಹಳ ಪ್ರಮುಖವಾದ ಪ್ರಶ್ನೆ. ಇದು ಮಾಹಿತಿಯ ಬಗ್ಗೆ ಇದೆ.

ಅಧ್ಯಕ್ಷರು.–ಇದನ್ನು ಬಹಳ ಪ್ರಮುಖವಾದುದು ಎಂದೇ ನಿಮ್ಮನ್ನು ಕರೆದಿದ್ದೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).–ಇಂತಹ ಪ್ರಮುಖಾಂಶ ಪ್ರಶ್ನೆಗೆ ಉತ್ತರ ರೆಡಿ ಇಲ್ಲ, ಸ್ವಲ್ಪ ಟೈಮ್ ಬೇಕು.

ಅಧ್ಯಕ್ಷರು.–ಅದರ ಪ್ರಾಮುಖ್ಯತೆಯನ್ನು ನೀವೆ ಕೆಡಿಸಿದಿರಿ.

ಶ್ರೀಮತಿ ಪೊಟವ್ಮ್ಮ.–ನಾನು ಅದನ್ನೇ ಹೇಳೋಣ ಎಂದು ಹೊರಟೆ ಮಾಹಿತಿಯ ಬಗ್ಗೆ ಪ್ರಮುಖವಾದ ಪ್ರಶ್ನೆ ಹಾಕಿದಾಗಲೂ ಸರ್ಕಾರ ಉತ್ತರ ಕೊಡುವುದರಲ್ಲಿ ಈ ರೀತಿ ಮಾಡಿದರೆ ಹೇಗೆ ?

ಅಧ್ಯಕ್ಷರು.–ಪ್ರಾತಿನಿಧ್ಯ ಕೊಡದಿದ್ದರೂ, ಪ್ರಶ್ನೆಗಾದರೂ ಉತ್ತರ ಕೊಡಬೇಕಂ.

ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ಕ್ರೀಡಾಂಗಣದ ಕೆಲಸದ ಪ್ರಗತಿಯ ಬಗ್ಗೆ

೨೫೯. ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ).—ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದ ಚಾಮುಂಡೇಶ್ವರಿ ಕ್ರೀಡಾಂಗಣದ ಕೆಲಸ ಯಾವ ಹಂತದಲ್ಲಿದೆ.

ಆ) ಈವರೆಗೂ ಈ ಕೆಲಸವನ್ನು ಪೂರೈಸದಿರಲು ಕಾರಣಗಳೇನು.

ಇ) ಪೂರ್ಣ ಮಟ್ಟದ ಕ್ರೀಡಾಂಗಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು).—

ಅ) ಈಗಾಗಲೇ ಕ್ರೀಡಾ ಚಟುವಟಿಕೆಗಳು ಪ್ರಾರಂಭವಾಗಿವೆ. ಮುಖ್ಯ ಪೆವಿಲಿಯನ್ (ಕ್ರೀಡಾಮಂಟಪ) ಪೂರ್ಣವಾಗುವ ಹಂತದಲ್ಲಿದೆ.

ಆ) ಹಣದ ಕೊರತೆಯಿಂದಾಗಿ ಪೂರೈಸಲು ತಡವಾಗಿರುತ್ತದೆ.

ಇ) ೧೯೯೧ ನೇ ಡಿಸೆಂಬರ್ ಅಂತ್ಯದ ವೇಳೆಗೆ ಈ ಕ್ರೀಡಾ ಸಮುಚ್ಚಯವನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.

ಶ್ರೀ ಕೆ. ಹರ್ಷಕುಮಾರ ಗೌಡ.—ಮೈಸೂರು ನಗರದ ಪ್ರಜಾಸಂಖ್ಯೆ ೧೦ ಲಕ್ಷ ಆದರೆ ಮೈಸೂರು ಜಿಲ್ಲೆಯ ಪ್ರಜಾ ಸಂಖ್ಯೆ ೩೬ ಲಕ್ಷ ಮೈಸೂರು ಒಂದು ಪ್ರಮುಖವಾದ ನಗರ ಇಲ್ಲಿಯವರೆಗೂ ಮೈಸೂರು ನಗರದಲ್ಲಿ ಕ್ರೀಡಾಂಗಣ ಆಗಿಲ್ಲ. ಈಗ ನಮ್ಮ ಯುವಕ ಮಂತ್ರಿಗಳು ಬಂದಿದ್ದಾರೆ. ಎಷ್ಟು ದಿವಸದಲ್ಲಿ ಈ ಕ್ರೀಡಾಂಗಣವನ್ನು ಪೂರ್ತಿಯಾಗಿ ವಹಿಸಿಕೊಡಲಾಗುತ್ತದೆ, ಅದ್ಯತೆ ಆಧಾರದ ಮೇಲೆ ಅದಷ್ಟು ಜಾಗ್ರತೆ ಇದನ್ನು ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ನಾನು ಅವರನ್ನು ಕೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಶ್ರೀ ಎಸ್. ರಮೇಶ್.—ಈಗಾಗಲೇ ಅಲ್ಲಿ ಕ್ರೀಡಾ ಚಟುವಟಿಕೆಗಳು ಪ್ರಾರಂಭವಾಗಿವೆ. ಪೆವಿಲಿಯನ್ ಕೆಲಸ ಮಾತ್ರ ತಡವಾಗಿದೆ. ೧೯೯೧ ನೇ ಡಿಸೆಂಬರ್ ಒಳಗಡೆ ಅದನ್ನು ಪೂರ್ಣಗೊಳಿಸಬೇಕೆಂದು ಈಗಾಗಲೇ ಸರಕಾರದಿಂದ ಆದೇಶ ಕೊಡಲಾಗಿದೆ.

ಶ್ರೀ ಕೆ. ಹರ್ಷಕುಮಾರ ಗೌಡ.—ಡಿಸೆಂಬರ್ ೯೧ ಅಂದರೆ ಅದು ೯೨ ನೇ ಇಸವಿ ಜನವರಿಗೂ ಹೋಗಬಹುದು. ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ಒಂದು ಆದೇಶ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.